ರಿಟರ್ನಿಂಗ್ ಆಫೀಸರ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ. ವಿಜಯಪುರ ಜಿಲ್ಲಾ: ವಿಜಯಪುರ
ಹಾಗೂ ಉಪ ವಿಭಾಗಾಧಿಕಾರಿಗಳು, ವಿಜಯಪುರ ಇವರ ಕಾರ್ಯಾಲಯ.

ನಂ:ಚುನಾವಣೆ/ಸ.ಸಂ.ಚು/ಸಿಆರ್/02/ಆಮಂಸಾಚು-11/2018-2019. ದಿನಾಂಕ:10-10-2018.

:: **ಚುನಾವಣೆಯ ವೇಳಾಪಟ್ಟಿ ಪ್ರಕಟಣೆ** ::

(ನಮೂನೆ-XII, ಕ.ಸ.ಸಂ.ನಿಯಮ 14 (3) ರನ್ವಯ)

ಮಾನ್ಯ ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ 3ನೇ ಮಹಡಿ, ಟಿ.ಟಿ.ಎಂ.ಸಿ. ಎ ಬ್ಲಾಕ್ ಶಾಂತಿನಗರ ಬೆಂಗಳೂರು ಇವರ ಆದೇಶ ಕ್ರಮಾಂಕ:ಸಚುಪ್ರಾ/ರಿಆನೇ-ಆಮಂ/ಬೆ/05/2018/251/1 ದಿನಾಂಕ:10/04/2018 ರನ್ವಯ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ, ವಿಜಯಪುರ ಇದರ ಆಡಳಿತ ಮಂಡಳಿಯ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ ಸಾಮಾನ್ಯ ಚುನಾವಣೆಗೆ ಮತ್ತು ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಸಲು ನನ್ನನ್ನು ರಿಟರ್ನಿಂಗ್ ಆಫೀಸರ್ ಎಂದು ನೇಮಕ ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 13 ಮತ್ತು 14(3) ರನ್ವಯ ಸದರಿ ಸಾಮಾನ್ಯ ಚುನಾವಣೆಗೆ ಮತ್ತು ಪದಾಧಿಕಾರಿಗಳ ಮುಕ್ತಾಯವಾದ ಎಲ್ಲ ಪದಾಧಿಕಾರಿಗಳ ಸ್ಥಾನಗಳಿಗೆ ಬ್ಯಾಂಕನ ಪೋಟ ನಿಯಮ 19 ಮತ್ತು ಉಪ ನಿಯಮ(ಬೈಲಾ) ಸಂಖ್ಯೆ 5ಅ(1) ರ ಪ್ರಕಾರ ಮಾನ್ಯ ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ 3ನೇ ಮಹಡಿ, ಟಿ.ಟಿ.ಎಂ.ಸಿ. ಎ ಬ್ಲಾಕ್ ಶಾಂತಿನಗರ ಬೆಂಗಳೂರು ಇವರು ಕ್ರಮಾಂಕ:ಸಚುಪ್ರಾ/ಬೆ/ವಿಜಿ/ಫೆ/256/2018/376/5 ದಿನಾಂಕ:25-05-2018 ರನ್ವಯ ಹಾಗೂ ನಂ:ಸಚುಪ್ರಾ/ಆಡಳಿತ/ಚುನಾವಣೆ/13/2017 ದಿ:29-12-2017 ರನ್ವಯ ಈಗಾಗಲೇ ಮಾನ್ಯ ಆಯುಕ್ತರಿಂದ ಸಾಮಾನ್ಯ ಚುನಾವಣಾ ಅಧಿಸೂಚನೆಯನ್ನು ಹೊರಡಿಸಲಾಗಿರುವ ಮೇರೆಗೆ ಈ ಕೆಳಗಿನಂತೆ ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ.

| ಅ ನಂ | ಪೋಟ ನಿಯಮ ಸಂಖ್ಯೆ | ಚುನಾವಣೆಯ ಮತಕ್ಷೇತ್ರ | ಸಂಖ್ಯೆ |
|---|---|---|---|
| 01 | 19(ಅ)(1) | ಪ್ರತಿ ತಾಲೂಕಿಗೆ ಒಬ್ಬ ಪ್ರತಿನಿಧಿಯಂತೆ ಕಾರ್ಯಕ್ಷೇತ್ರದಲ್ಲಿ ಪ್ರಾಥಮಿಕ ಒಕ್ಕಲುತನ ಪತ್ತಿನ ಸಹಕಾರಿ ಸಂಘಗಳಿಂದ(ಪಿ.ಎಸ್.ಎಸ್.ಎನ್/ಎಫ್.ಎಸ್.ಸಿ.ಎಸ್./ಜಿ.ಎಸ್.ಎಸ್./ ಪಿಕೆಪಿಎಸ್/ಒಕ್ಕಲುತನ ಸಹಕಾರ ಬ್ಯಾಂಕ ಅಥವಾ ಯಾವುದೇ ಹೆಸರಿನಲ್ಲಿ ಕರೆಯುವುದು) 5 ಪ್ರತಿನಿಧಿಗಳು<br>1)ವಿಜಯಪುರ ತಾಲೂಕು<br>2)ಬ,ಬಾಗೇವಾಡಿ ತಾಲೂಕು<br>3)ಮುದ್ದೇಬಿಹಾಳ ತಾಲೂಕು<br>4)ಇಂಡಿ ತಾಲೂಕು<br>5)ಸಿಂದಗಿ ತಾಲೂಕು | <br><br><br>01<br>01<br>01<br>01<br>01 |
| 02 | 19(ಅ)(2) | ಕಾರ್ಯಕ್ಷೇತ್ರದಲ್ಲಿ ಬರುವ ಎಲ್ಲ ತಾಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರಿ ಸಂಘಗಳಿಂದ ಒಬ್ಬ ಪ್ರತಿನಿಧಿ | 01 |
| 03 | 19(ಅ)(3) | ಕಾರ್ಯಕ್ಷೇತ್ರದಲ್ಲಿ ಬರುವ ಎಲ್ಲ ಪಟ್ಟಣ ಸಹಕಾರಿ ಬ್ಯಾಂಕುಗಳು ಮತ್ತು ಬಿನಶೇತ್ಕಿ ಸಹಕಾರಿ ಸಂಘಗಳ ಒಬ್ಬ ಪ್ರತಿನಿಧಿ | 01 |
| 04 | 19(ಅ)(4) | ಕಾರ್ಯಕ್ಷೇತ್ರದಲ್ಲಿ ಬರುವ ಹಾಲು ಉತ್ಪಾದಕರ ಸಹಕಾರಿ ಸಂಘಗಳಿಂದ ಒಬ್ಬ ಪ್ರತಿನಿಧಿ | 01 |
| 05 | 19(ಅ)(5) | ಕಾರ್ಯಕ್ಷೇತ್ರದಲ್ಲಿ ಬರುವ ನೇಕಾರರ ಸಹಕಾರಿ ಸಂಘಗಳು ಹಾಗೂ ಕುರಿ ಸಂಗೋಪನಾ ಸಹಕಾರ ಸಂಘಗಳಿಂದ ಒಬ್ಬ ಪ್ರತಿನಿಧಿ | 01<br>01 |
| 06 | 19(ಅ)(6) | ಕಾರ್ಯಕ್ಷೇತ್ರದಲ್ಲಿ ಬರುವ ಎಲ್ಲ ಸಂಸ್ಕರಣ ಹಾಗೂ ಔದ್ಯೋಗಿಕ ಸಹಕಾರಿ ಸಂಘಗಳಿಂದ ಒಬ್ಬ ಪ್ರತಿನಿಧಿಯನ್ನು ಚುನಾಯಿಸುವುದು | 01 |
| 07 | 19(ಅ)(7) | ಕಾರ್ಯಕ್ಷೇತ್ರದಲ್ಲಿ ಬರುವ ಮೇಲೆ ಹೇಳಿದ ಸಂಘಗಳನ್ನು ಬಿಟ್ಟು ಉಳಿದ ಎಲ್ಲಾ ಸಹಕಾರಿ ಸಂಘಗಳಿಂದ ಒಬ್ಬ ಪ್ರತಿನಿಧಿ | 01 |
| | | ಒಟ್ಟು | 11 |

ದಿನಾಂಕ:31-10-2018 ರಂದು ಬೆಳಗ್ಗೆ:09-00 ಘಂಟೆಯಿಂದ ಸಂಜೆ:04-00 ಘಂಟೆಯವರೆಗೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ.ಕೆ.ಸಿ.ನಗರ ಸೋಲಾಪೂರ ರಸ್ತೆ ವಿಜಯಪುರ ಇದರ ಆವರಣದಲ್ಲಿ ಗುರುತಿಸಲಾಗಿರುವ ಮತಗಟ್ಟೆಗಳಲ್ಲಿ ಚುನಾವಣಾ ಪ್ರಕ್ರಿಯ ಜರುಗಿಸಲು ಚುನಾವಣಾ ವೇಳಾಪಟ್ಟಿಯನ್ನು ಈ ಕೆಳಗಿನಂತೆ ಪ್ರಕಟಿಸಿದ್ದೇನೆ.

| ಅ.ನಂ | ಚುನಾವಣೆಯ ಕಾರ್ಯಕ್ರಮಗಳ ವಿವರ | ದಿನಾಂಕ ಹಾಗೂ ವೇಳೆ | ಸ್ಥಳ | ನಿಯಮಿಸಲ್ಪಟ್ಟ ಅಧಿಕಾರಿ |
|---|---|---|---|---|
| ಎ | ಅಭ್ಯರ್ಥಿ ಸದಸ್ಯರು ಚುನಾವಣೆಗೆ ಉಮೇದುವಾರನಾಗಿ ಸ್ಪರ್ಧಿಸಲಿಚ್ಛಿಸಿ ನಾಮಪತ್ರ ಸಲ್ಲಿಸುವ ಪ್ರಾರಂಭದ ದಿನಾಂಕ ಮತ್ತು ಸಮಯ | ದಿನಾಂಕ:17-10-2018 ರಿಂದ ಬೆಳಗ್ಗೆ:11-00 ಘಂಟೆಯಿಂದ ಮಧ್ಯಾಹ್ನ:03-00 ಘಂಟೆಯವರೆಗೆ. | ವಿಜಯಪುರ ಡಿಸಿಸಿ ಬ್ಯಾಂಕನಿ,ಕೇಂದ್ರ ಕಛೇರಿ.ಕೆ.ಸಿ.ನಗರ ಸೋಲಾಪೂರ ರಸ್ತೆ,ವಿಜಯಪುರ | ರಿಟರ್ನಿಂಗ್ ಆಫೀಸರ್ |

| | | | | |
|---|---|---|---|---|
| ಬಿ | ಚುನಾವಣೆಗೆ ಉಮೇದುವಾರನಾಗಿ ಸ್ಪರ್ಧಿಸಲಿಚ್ಛಿಸುವ ಸದಸ್ಯರು ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ (ಕ.ಸ.ಸಂ.ನಿ. 14 ಎ) | ದಿನಾಂಕ:24-10-2018 ರಂದು ಬೆಳಗ್ಗೆ:11-00 ಘಂಟೆಯಿಂದ ಮಧ್ಯಾಹ್ನ:03-00ಘಂಟೆಯವರೆಗೆ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ | ರಿಟರ್ನಿಂಗ್ ಆಫೀಸರ್ |
| ಸಿ | ರಿಟರ್ನಿಂಗ್ ಆಫೀಸರ್‌ರವರಿಂದ ಚುನಾವಣೆಗೆ ಸ್ವೀಕರಿಸಿದ ಅಭ್ಯರ್ಥಿಗಳ ನಾಮಪತ್ರಗಳ ಪರಿಶೀಲನೆ ದಿನಾಂಕ ಮತ್ತು ಸಮಯ (ಕ.ಸ.ಸಂ.ನಿ. 14 ಬಿ) | ದಿನಾಂಕ:25-10-2018 ರಂದು ಬೆಳಗ್ಗೆ:11-00 ಘಂಟೆಯಿಂದ ಮುಕ್ತಾಯದವರೆಗೆ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ | ರಿಟರ್ನಿಂಗ್ ಆಫೀಸರ್ |
| ಡಿ | ರಿಟರ್ನಿಂಗ್ ಆಫೀಸರ್‌ರವರಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ಕ್ರಮಬದ್ಧವಾದ ಉಮೇದುವಾರ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ(ಕ.ಸ.ಸಂ.ನಿ.14ಬಿ (4) | ದಿನಾಂಕ:25-10-2018 ರಂದು ನಾಮಪತ್ರಗಳ ಪರಿಶೀಲನೆಯು ಮುಕ್ತಾಯವಾದ ನಂತರ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ | ರಿಟರ್ನಿಂಗ್ ಆಫೀಸರ್ |
| ಇ | ಚುನಾವಣಾ ಕಣದಲ್ಲುಳಿದ ಉಮೇದುವಾರ ಅಭ್ಯರ್ಥಿಯು ತನ್ನ ಉಮೇದುವಾರಿಕೆಯ ನಾಮಪತ್ರವನ್ನು ಹಿಂದಕ್ಕೆ ಪಡೆದುಕೊಳ್ಳುವ ಲಿಖಿತ ಸೂಚನೆಯನ್ನು ನೀಡುವ ಪ್ರಾರಂಭ ಮತ್ತು ಕೊನೆಯ ದಿನಾಂಕ/ಸಮಯ (ಕ.ಸ.ಸಂ.ನಿ.14 ಸಿ) | ದಿನಾಂಕ:26-10-2018 ರಂದು ಬೆಳಗ್ಗೆ:11-00 ಘಂಟೆಯಿಂದ ಮಧ್ಯಾಹ್ನ:03-00 ಘಂಟೆಯವರೆಗೆ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ | ರಿಟರ್ನಿಂಗ್ ಆಫೀಸರ್ |
| ಎಫ್ | ರಿಟರ್ನಿಂಗ್ ಆಫೀಸರ್‌ರವರಿಂದ ಸ್ಪರ್ಧಿಸಲು ಅರ್ಹರಾಗಿ ಅಂತಿಮ ಕಣದಲ್ಲುಳಿದ ಉಮೇದುವಾರ ಅಭ್ಯರ್ಥಿಗಳ ಯಾದಿಯನ್ನು ಪ್ರಕಟಿಸುವುದು (ಕ.ಸ.ಸಂ.ನಿ. 14 ಡಿ) | ದಿನಾಂಕ:26-10-2018 ರಂದು ಮಧ್ಯಾಹ್ನ:03-00 ಘಂಟೆಯನಂತರ | ಬ್ಯಾಂಕಿನ ಆಡಳಿತ ಕಛೇರಿಯಲ್ಲಿ | ರಿಟರ್ನಿಂಗ್ ಆಫೀಸರ್ |
| ಜಿ | ರಿಟರ್ನಿಂಗ್ ಆಫೀಸರ್‌ರವರಿಂದ ಸ್ಪರ್ಧಿಸಲು ಅರ್ಹರಾಗಿ ಅಂತಿಮ ಕಣದಲ್ಲುಳಿದ ಉಮೇದುವಾರ ಅಭ್ಯರ್ಥಿಗಳಿಗೆ ಚುನಾವಣಾ ಚಿನ್ಹೆ ಹಂಚಿಕೆ ಮಾಡುವುದು. (ಕ.ಸ.ಸಂ.ನಿ. 14 ಇ) | ದಿನಾಂಕ:26-10-2018 ರಂದು ಮಧ್ಯಾಹ್ನ :03-00 ಘಂಟೆಯ ನಂತರ | ಬ್ಯಾಂಕಿನ ಆಡಳಿತ ಕಚೇರಿಯ ನೋಟೀಸು ಬೋರ್ಡಿಗೆ ಪ್ರಕಟಿಸುವುದು. | ರಿಟರ್ನಿಂಗ್ ಆಫೀಸರ್ |
| ಹೆಚ್ | ರಿಟರ್ನಿಂಗ್ ಆಫೀಸರ್‌ರವರಿಂದ ಚುನಾವಣಾ ಅಂತಿಮ ಕಣದಲ್ಲಿರುವ ಉಮೇದುವಾರರ ಹೆಸರು ಮತ್ತು ಹಂಚಿಕೆ ಮಾಡಲಾದ ಚುನಾವಣಾ ಚಿಹ್ನೆಯನ್ನೊಳಗೊಂಡ ಪಟ್ಟಿಯ ಪ್ರಕಟಣೆ (ಕ.ಸ.ಸಂ.ನಿ. 14 ಇ &14 ಎಫ್) | | | ರಿಟರ್ನಿಂಗ್ ಆಫೀಸರ್ |
| ಆಯ್ | ಚುನಾವಣೆಯ ಮತದಾನ ದಿನಾಂಕ, ಸಮಯ ಮತ್ತು ಸ್ಥಳ | ದಿನಾಂಕ:31-10-2018 ರಂದು ಬೆಳಗ್ಗೆ:09-00 ಘಂಟೆಯಿಂದ ಸಾಯಂಕಾಲ:04-00 ಘಂಟೆಯವರೆಗೆ, | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ,ಕೆ.ಸಿ.ನಗರ ಸೋಲಾಪೂರ ರಸ್ತೆ ವಿಜಯಪುರ ಇದರ ಆವರಣದಲ್ಲಿ | ರಿಟರ್ನಿಂಗ್ ಆಫೀಸರ್ |
| ಜೆ | ಮತಗಳ ಎಣಿಕೆ ಮಾಡುವುದು (ಕ.ಸ.ಸಂ.ನಿ. 14 ಎಕ್ಸ್) | ದಿನಾಂಕ:31-10-2018 ರಂದು ಮತದಾನದ ನಂತರ ಸಂಜೆ:05-00 ಘಂಟೆಯಿಂದ ಮುಕ್ತಾಯದವರೆಗೆ | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ,ಕೆ.ಸಿ.ನಗರ ಸೋಲಾಪೂರ ರಸ್ತೆ ವಿಜಯಪುರ ಇದರ ಆವರಣದಲ್ಲಿ | ರಿಟರ್ನಿಂಗ್ ಆಫೀಸರ್ |
| ಕೆ | ರಿಟರ್ನಿಂಗ್ ಆಫೀಸರ್‌ರವರಿಂದ ಚುನಾವಣೆಯ ಫಲಿತಾಂಶ ಪ್ರಕಟಣೆ (ಕ.ಸ.ಸಂ.ನಿ. 14 ವೈ) | ದಿನಾಂಕ:31-10-2018 ರಂದು ಮತ ಎಣಿಕೆಯ ನಂತರ | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ,ಕೆ.ಸಿ.ನಗರ ಸೋಲಾಪೂರ ರಸ್ತೆ ವಿಜಯಪುರ ಇದರ ಆವರಣದಲ್ಲಿ | ರಿಟರ್ನಿಂಗ್ ಆಫೀಸರ್ |

ನಂ:ಚುನಾವಣೆ/ಸ.ಸಂ.ಚು/ಸಿಆರ್/02/ಅಮಂಸಾಚು-11/2018-2019.　　　　ದಿನಾಂಕ:10-10-2018

**ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ ವಿಜಯಪುರ ಇದರ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆಗೆ ಮತ್ತು ಪದಾಧಿಕಾರಿಗಳ ಪದಾವಧಿ ಮುಕ್ತಾಯವಾದ ಎಲ್ಲ 11 ನಿರ್ದೇಶಕ ಮಂಡಳಿಯ ಸಾಮಾನ್ಯ ಸ್ಥಾನಗಳಿಗೆ ಚುನಾಯಿಸಬೇಕಾದ ಸಾಮಾನ್ಯ ಚುನಾವಣೆ 2018.**

**:: ಸೂಚನೆಗಳು ::**

1) ಚುನಾವಣೆಯು ಜರುಗುವ ದಿನಾಂಕಕ್ಕಿಂತ ಒಂದು ವರ್ಷದ ಹಿಂದೆ ಸದಸ್ಯತ್ವ ಹೊಂದಿದ ಸದಸ್ಯರು ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸಲು ಮತ್ತು ಮತದಾನ ಮಾಡಲು ಹಕ್ಕುವುಳ್ಳವರಾಗಿರುತ್ತಾರೆ.

2) ನಿರ್ದೇಶಕ ಮಂಡಳಿಗೆ ಆಯ್ಕೆಯಾಗಬೇಕಾದಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ತಿದ್ದುಪಡಿ 2013 ಕಲಂ 20 (2) ರನ್ವಯ ಮತ್ತು ಬ್ಯಾಂಕಿನ ಬೈಲಾಗಳನ್ವಯ ಅನರ್ಹತೆ ಹೊಂದಿರುವ ಸದಸ್ಯರು ಚುನಾವಣೆಗೆ ಸ್ಪರ್ಧಿಸಲು/ಮತ ಚಲಾಯಿಸಲು ಅನರ್ಹರಾಗಿರುತ್ತಾರೆ.

3) ಬ್ಯಾಂಕಿನ ಉಪ ನಿಯಮ (ಬೈಲಾ ಸಂಖ್ಯೆ5ಅ(2) (b) ಪ್ರಕಾರ ಸದಸ್ಯತ್ವ ಪಡೆದ ಸಹಕಾರ ಸಂಘಗಳು ತಮ್ಮ ಪ್ರತಿನಿಧಿಯನ್ನು ಕಳುಹಿಸುವ ಬಗ್ಗೆ ಆಡಳಿತ ಮಂಡಳಿಯ ಠರಾವಿನ ದೃಢೀಕೃತ ನಕಲನ್ನು ಮತ್ತು ಪ್ರತಿನಿಧಿಯ ಭಾವಚಿತ್ರ ಸಹಿತ ನೀಡಿರುವ ಗುರುತಿನ ಕಾರ್ಡ (Identity Card) ಹಾಜರಪಡಿಸುವುದು ಕಡ್ಡಾಯವಾಗಿರುತ್ತದೆ.

4) ಬ್ಯಾಂಕಿನ ಉಪ ನಿಯಮ (ಬೈಲಾ ಸಂಖ್ಯೆ5ಅ(2) (b) ಪ್ರಕಾರ ಸದಸ್ಯತ್ವ ಪಡೆದ ಸಹಕಾರ ಸಂಘಗಳು ತಮ್ಮ ಪ್ರತಿನಿಧಿಯನ್ನು ಕಳುಹಿಸುವ ಬಗ್ಗೆ ಆಡಳಿತ ಮಂಡಳಿಯ ಠರಾವಿನ ದೃಢೀಕೃತ ನಕಲನ್ನು ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ಹಾಗೂ ಇನ್ನಿತರ ಯಾವುದೇ ಸಹಕಾರ ಬ್ಯಾಂಕ/ ಸಂಘಗಳಿಗೆ ಮುದ್ದತ್ ಮೀರಿಲ್ಲ ಎಂಬ ಬಗ್ಗೆ ಪ್ರಮಾಣ ಪತ್ರವನ್ನು ನಾಮಿನೇಷನ್/ ಉಮೇದುವಾರಿಕೆ ಅರ್ಜಿಯ ಜೊತೆ ಲಗತ್ತಿಸಬೇಕು.

5) ಸದರ ಚುನಾವಣೆಗೆ ಮತ ಚಲಾಯಿಸಲು ಮತ್ತು ನಾಮ ಪತ್ರ ಸಲ್ಲಿಸಲು ಅರ್ಹ ಇರುವ ಸದಸ್ಯ ಮತದಾರರ ಅಂತಿಮ ಯಾದಿಯನ್ನು **ದಿನಾಂಕ:15-10-2018 ರಂದು ಬ್ಯಾಂಕಿನ ಆಡಳಿತ ಕಛೇರಿಯ ನೋಟಿಸ್ ಬೋರ್ಡಿಗೆ** ಪ್ರಚುರ ಪಡಿಸಲಾಗುವುದು.

6) ಸದರಿ ಬ್ಯಾಂಕಿನಿಂದ ಅಧಿಕೃತವಾಗಿ ಪಡೆದ ಗುರುತಿನ ಚೀಟಿ ಮತ್ತು ಚುನಾವಣಾ ಭೂತ್‌ನ ಗುರುತಿನ ಚೀಟಿ ಇಲ್ಲದೇ ಚುನಾವಣೆಯಲ್ಲಿ ಮತ ಚಲಾಯಿಸಲು ಬ್ಯಾಂಕಿನ ಸದಸ್ಯರಿಗೆ ಅವಕಾಶವಿರುವುದಿಲ್ಲ.

7) ಉಮೇದುವಾರರಿಗೆ ನಾಮಪತ್ರ ಹಾಗೂ ಉಮೇದುವಾರಿಕೆ ಹಿಂತೆಗೆದುಕೊಳ್ಳಲು ಬೇಕಾಗುವ ನೋಟಿಸುಗಳು ಬ್ಯಾಂಕಿನ ಆಡಳಿತ ಕಛೇರಿಯ ವಿಭಾಗದಲ್ಲಿರುವ ಚುನಾವಣಾಧಿಕಾರಿಗಳ ಕಛೇರಿಯಲ್ಲಿ ಲಭ್ಯವಿರುತ್ತವೆ. ಅವುಗಳನ್ನು ರೂ.100-00 ಗಳ ಶುಲ್ಕನ್ನು ಪಾವತಿಸಿ ಪಡೆಯಬಹುದಾಗಿರುತ್ತದೆ.

8) ನಿಯಮ 14(ಎ) ರನ್ವಯ ಒಬ್ಬ ಅಭ್ಯರ್ಥಿಯು ಒಂದೇ ಕ್ಷೇತ್ರಕ್ಕೆ ಮಾತ್ರ ಸ್ಪರ್ಧಿಸಬಹುದು ಹಾಗೂ ಪ್ರತಿಯೊಂದು ಉಮೇದುವಾರ ಅಭ್ಯರ್ಥಿಯ ನಾಮಪತ್ರಕ್ಕೆ, ಮತದಾನ ಮಾಡಲು ಅರ್ಹರಾದ ಒಬ್ಬ ಸ್ಥದಸ್ಯನು ಸೂಚಕನಾಗಿ ಸಹಿ ಮಾಡಿರತಕ್ಕದ್ದು ಹಾಗೂ ಒಬ್ಬ ಸದಸ್ಯನು ಒಬ್ಬರಿಗಿಂತ ಹೆಚ್ಚು ಉಮೇದುವಾರ ಅಭ್ಯರ್ಥಿಗೆ ಸೂಚಿಸತಕ್ಕದ್ದಲ್ಲ. ಅಭ್ಯರ್ಥಿಯು ಚುನಾವಣೆಗೆ ಸ್ಪರ್ಧಿಸಲು ತನ್ನ ಇಚ್ಛೆಯನ್ನು ವ್ಯಕ್ತಪಡಿಸುವ ಘೋಷಣೆಯನ್ನು ನಾಮಪತ್ರ ಒಳಗೊಂಡಿರತಕ್ಕದ್ದು ಮತ್ತು ನಾಮಪತ್ರವನ್ನು ಖುದ್ದಾಗಿ ಉಮೇದುವಾರನು ರಿಟರ್ನಿಂಗ್ ಅಧಿಕಾರಿಗಳಿಗೆ (ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ) ಸಲ್ಲಿಸತಕ್ಕದ್ದು. **(ಅಭ್ಯರ್ಥಿಗಳು ನಾಮಪತ್ರದೊಂದಿಗೆ ಬ್ಯಾಂಕಿನ ಗುರುತಿನ ಚೀಟಿ ನಕಲು ಪ್ರತಿ, ಮೂಲ ಠೇವಣಿ ರಶೀದಿ, ಮತದಾರ ಮತಪಟ್ಟಿಯ ದೃಢೀಕೃತ ಪ್ರತಿ ಮತ್ತು ಕ.ಸ.ಸಂ.ಅಧಿನಿಯಮ 1959 ರ ನಿಯಮ 29ಸಿ- ಉಪನಿಯಮ (1) ರಿಂದ (8) ರಲ್ಲಿ ವಿವರಿಸಿದಂತೆ ಘೋಷಣಾ ಪ್ರತಿಜ್ಞಾ ಪತ್ರಗಳೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸತಕ್ಕದ್ದು).**

9) ನಿಯಮ 14ಎ(3) ರ ಪ್ರಕಾರ ಚುನಾವಣೆ ನಾಮಪತ್ರ ಸಲ್ಲಿಸುವ ಅರ್ಹ ಉಮೇದುವಾರ ಅಭ್ಯರ್ಥಿಯು ನಾಮಪತ್ರದೊಂದಿಗೆ ಸಾಮಾನ್ಯ ಅಭ್ಯರ್ಥಿಗಳು ರೂ. 5,000/- (ರೂಪಾಯಿ **ಐದಯ ಸಾವಿರ** ಮಾತ್ರ), ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳಾ ಹಾಗೂ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ರೂ.2500/- (ರೂಪಾಯಿ **ಎರಡು ಸಾವಿರದ ಐದು ನೂರು** ಮಾತ್ರ) ಗಳ ಚುನಾವಣಾ ಠೇವಣಿ ಭರಿಸತಕ್ಕದ್ದು. ಈ ಬಗ್ಗೆ ಬ್ಯಾಂಕನ ನಗದು ವಿಭಾಗದಲ್ಲಿ ಸಂದಾಯ ಮಾಡಿದ ಠೇವಣಿ ನಗದು ರಶೀದಿ/ ಬ್ಯಾಂಕರ್ಸ್ ಚೆಕ್/ ಡಿ.ಡಿ. ಮೂಲಕ ಪಾವತಿಸಿದ ಮೂಲ ರಶೀದಿ/ಚೆಕ್/ಡಿ.ಡಿ ಯನ್ನು ನಾಮಪತ್ರದೊಂದಿಗೆ ಲಗತ್ತಿಸತಕ್ಕದ್ದು. ಚುನಾವಣಾ ಠೇವಣಾತಿ ಹಣ ಭರಿಸದೇ ನಾಮಪತ್ರ ಸಲ್ಲಿಸಿದಲ್ಲಿ ಅದನ್ನು ಮುನ್ಸೂಚನೆ ನೀಡದೇ ತಿರಸ್ಕರಿಸಲಾಗುವುದು.

10) ಉಮೇದುವಾರಿಕೆ ಅರ್ಜಿ ಪರಿಶೀಲನೆಯ ಕಾಲದಲ್ಲಿ ಉಮೇದುವಾರರು ಸ್ವತ: ಹಾಜರಿರತಕ್ಕದ್ದು.

11) ನಾಮಪತ್ರವನ್ನು ವಾಪಸ್ಸು ಪಡೆಯುವಾಗ ಅಭ್ಯರ್ಥಿಯು ಖುದ್ದಾಗಿ ಹಾಜರಾಗಿ ಲಿಖಿತ ಅರ್ಜಿಯನ್ನು ಬರೆದು ಸಹಿ ಮಾಡಿ, ನಾಮಪತ್ರ ಸಲ್ಲಿಸಿದ ಸ್ವೀಕೃತಿ ಪ್ರತಿಯೊಂದಿಗೆ ನಿಗಧಿತ ದಿನಾಂಕ ಹಾಗೂ ಸಮಯದಲ್ಲಿ ರಿಟರ್ನಿಂಗ್ ಆಫೀಸರ್‌ರಿಗೆ ಸಲ್ಲಿಸುವುದು.

12) ಉಮೇದುವಾರಿಕೆಯ ನಾಮಪತ್ರಗಳಲ್ಲಿ ಚುನಾವಣೆಗೆ ಇಚ್ಛಿಸಿದ ರಾಜಕೀಯ ಚಿಹ್ನೆಗಳನ್ನು ಹೊರತುಪಡಿಸಿ, ಮೂರು ಚಿಹ್ನೆಗಳನ್ನು ನಮೂದಿಸಬಹುದು. ಚಿಹ್ನೆಗಳ ಹಂಚಿಕೆಯು ನಾಮಪತ್ರ ಸಲ್ಲಿಸಿದ ಅನುಕ್ರಮವಾರು ವಿತರಿಸಲಾಗುವುದು ಮತ್ತು ಚಿಹ್ನೆಗಳ ಹಂಚಿಕೆ/ ನೀಡುವ ಅಂತಿಮ ಅಧಿಕಾರ ರಿಟರ್ನಿಂಗ್ ಆಫೀಸರ್‌ರವರ ಅಂತಿಮ ನಿರ್ಧಾರಕ್ಕೆ ಒಳಪಟ್ಟಿರುತ್ತದೆ. ಚುನಾವಣೆಯ ಮಾದರಿ ಚಿಹ್ನೆಗಳನ್ನು ಬ್ಯಾಂಕಿನ ನೋಟೀಸು ಬೋರ್ಡಿಗೆ ಪ್ರಕಟಿಸಲಾಗುವುದು ಹಾಗೂ ಅಗತ್ಯವಿದ್ದಲ್ಲಿ ಬ್ಯಾಂಕಿನ ಆಡಳಿತ ಕಛೇರಿಯಿಂದ ಪಡೆದುಕೊಂಡು ಅವುಗಳ ಪ್ರತಿಯನ್ನು ನಾಮಪತ್ರದೊಂದಿಗೆ ಸಲ್ಲಿಸಬಹುದಾಗಿದೆ

13) ಚುನಾವಣೆಗೆ ಸ್ಪರ್ಧಿಸಿ ನಿಯಮ 14-ಎಇ(4)(3) ನೇ ಉಪ ನಿಯಮದ ಉಪಬಂಧಗಳಿಗೆ ಒಳಪಟ್ಟು, ಯಾವುದೇ ಅಭ್ಯರ್ಥಿಯು ಚುನಾಯಿತನಾಗದಿದ್ದರೆ ಮತ್ತು ಒಟ್ಟು ಚಲಾವಣೆಯಾಗಿ ಸಿಂಧುವಾದ ಮತಗಳಲ್ಲಿ ಸಾಮಾನ್ಯ ಅಭ್ಯರ್ಥಿಗಳು 1/6 ಮತ್ತು ಪರಿಶಿಷ್ಟ ಜಾತಿ/ಪಂಗಡ ಹಾಗೂ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು 1/10 ಭಾಗದ ಮತಗಳನ್ನು ಸ್ಪರ್ಧಿಸಿ ಕಣದಲ್ಲುಳಿದ ಅಭ್ಯರ್ಥಿಗಳು ಪಡೆಯದಿದ್ದಲ್ಲಿ ಚುನಾವಣಾ ಠೇವಣಿಯನ್ನು ಹಿಂತಿರುಗಿಸದೇ, ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಸ್ಥಳ : ಬ್ಯಾಂಕಿನ ಆಡಳಿತ ಕಚೇರಿ,
ದಿನಾಂಕ : 10-10-2018.

(ಶ್ರೀ ರವೀಂದ್ರ ಕರಲಿಂಗಣ್ಣವರ್ ,ಕೆ.ಎ.ಎಸ್.)
ರಿಟರ್ನಿಂಗ್ ಆಫೀಸರ್
ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ.ವಿಜಯಪುರ
ಹಾಗೂ ಉಪ ವಿಭಾಗಾಧಿಕಾರಿಗಳು, ವಿಜಯಪುರ

# ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ., ವಿಜಯಪುರ

ನಂ:ಆಡಳಿತ/ಪಿಡಿ/ಚುನಾವಣೆ/4986/2018 ವಿಜಯಪುರ ದಿನಾಂಕ : 10/10/2018

ಗೇ,
ಅಧ್ಯಕ್ಷರು
ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ, ಬ್ಯಾಂಕಿನ ಸದಸ್ಯತ್ವ ಹೊಂದಿದ ಅರ್ಹ ಮತದಾರರಿಗೆ

1) ವಿಜಯಪುರ. ಬ.ಬಾಗೇವಾಡಿ,ಮುದ್ದೆಬಿಹಾಳ, ಇಂಡಿ ಹಾಗೂ ಸಿಂದಗಿ ತಾಲುಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು,
2) ತಾಲೂಕಾ ಒಕ್ಕುಲತನ ಹುಟ್ಟುವಳಿ ಮಾರಾಟ ಸಹಕಾರ ಸಂಘಗಳು
3) ಪಟ್ಟಣ ಸಹಕಾರ ಬ್ಯಾಂಕಗಳು ಹಾಗೂ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು
4) ಹಾಲು ಉತ್ಪಾದಕರ ಸಹಕಾರ ಸಂಘಗಳು
5) ನೇಕಾರರ ಸಹಕಾರ ಸಂಘಗಳು ಹಾಗೂ ಕು ಸೋಗೋಪನಾ ಸಹಕಾರ ಸಂಘಗಳು
6) ಸಂಸ್ಕರಣ ಹಾಗೂ ಔದ್ಯೋಗಿಕ ಸಹಕಾರ ಸಂಘಗಳು
7) ಮೇಲೆ ಹೇಳಿದ ಸಂಘಗಳನ್ನು ಬಿಟ್ಟು ಇತರೆ ಸಹಕಾರ ಸಂಘಗಳು

ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು

ಪ್ರತಿ : ಬ್ಯಾಂಕಿನ ಎಲ್ಲ ಶಾಖಾ ವ್ಯವಸ್ಥಾಪಕರುಗಳಿಗೆ ಮಾಹಿತಿಗಾಗಿ ಹಾಗೂ ತಮ್ಮ ಶಾಖೆಯ ಸೂಚನಾ ಫಲಕದ ಮೇಲೆ ಪ್ರಸಿದ್ಧಿಸುವ ಕುರಿತು ಕ್ರಮವಿಡಲು ಸೂಚಿಸಿದೆ.

ಪ್ರತಿ : ಅಭಿನಂದನೆಗಳೊಂದಿಗೆ ಮಾಹಿತಿಗಾಗಿ.

1) ಸಂಯುಕ್ತ ನಿಬಂಧಕರು ಸಹಕಾರ ಸಂಘಗಳು ಬೆಳಗಾವಿ ಪ್ರಾಂತ ಬೆಳಗಾವಿ
2) ಉಪ ನಿಬಂಧಕರು ಸಹಕಾರ ಸಂಘಗಳು ವಿಜಯಪುರ ಜಿಲ್ಲೆ ವಿಜಯಪುರ.
3) ಸಾಹಾಯಕ ನಿಬಂಧಕರು ಸಹಕಾರ ಸಂಘಗಳು ವಿಜಯಪುರ ಹಾಗೂ ಇಂಡಿ ವಿಭಾಗಗಳು.

ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು